ಮನೆಗೆ ಹೋಗಿ, ಅಂದು ಸಂಜೆಯೇ ಅಬ್ರಾಹಮ್‌ಗೆ ಹೇಳಿದೆ, 'ಬನ್ನಿ, ಸಮುದ್ರ ತೀರದಲ್ಲಿ ಸ್ವಲ್ಪ ವಾಕಿಂಗ್ ಮಾಡಿ ಬರೋಣ.'

'ವಾಕಿಂಗ್?'

'ಹೌದು, ಸ್ವಚ್ಛ ವಾತಾವರಣದಲ್ಲಿ ವಾಕಿಂಗ್ ಮಾಡಿದರೆ, ಮೆದುಳು ಸ್ವಚ್ಛವಾಗುತ್ತದೆ' ಎಂದೆ.

ಅಬ್ರಾಹಮ್‌ಗೆ ವಾಕಿಂಗ್ ಹೋಗಲು ಮನಸ್ಸಿರಲಿಲ್ಲ, ಆದರೆ ಒಪ್ಪಿದ. ನಾವಿಬ್ಬರು ಮನೆಯಿಂದ ಹೊರಟು, ಚರ್ಚ್‌ನ ಪೂರ್ವದ ಸಮುದ್ರ ತೀರದಲ್ಲಿ ಹೋದೆವು. ನಾನು ಮತ್ತು ಅಬ್ರಾಹಮ್ ಮಾತ್ರ... ಹರಿಯುವ ಹಿಂದ್ ಮಹಾಸಾಗರ... ಅಲೆಗಳೊಂದಿಗೆ ಡಿಕ್ಕಿ ಹೊಡೆಯುವ, ಸರಸರ ಶಬ್ದ ಮಾಡುವ ಗಾಳಿ... ನಾನು ನನ್ನ ಮನಸ್ಸಿನಲ್ಲಿರುವುದನ್ನು ಹೇಳಲು ಧೈರ್ಯವನ್ನು ಒಟ್ಟುಗೂಡಿಸುತ್ತಿದ್ದೆ. ಹೃದಯ ತೀವ್ರವಾಗಿ ಬಡಿದುಕೊಳ್ಳುತ್ತಿತ್ತು. ಒಂದು ಕ್ಷಣ, ಸುಮ್ಮನಿದ್ದು ಬಿಡಲೇ, ಹೇಗಿದೆಯೋ, ಹಾಗೆಯೇ ನಡೆದುಕೊಂಡು ಹೋಗಲಿ ಎಂದೂ ಅನ್ನಿಸಿತು.

ಇಲ್ಲ, ಒಳಗಿನಿಂದ ಧ್ವನಿ ಮೂಡಿತು... ನ್ಯಾನ್ಸಿ, ನೀನಿವತ್ತು ಎಲ್ಲವನ್ನೂ ಹೇಳಬೇಕು.

ನಾವಿಬ್ಬರೂ ಮುಂದೆ ಮುಂದೆ ಸಾಗುತ್ತಿದ್ದೆವು. ದೂರದಲ್ಲಿ ಸೂರ್ಯ ಮುಳುಗುತ್ತಿದ್ದ, ಅವನ ಕೆಂಬಣ್ಣ ನೀರಿನಲ್ಲಿ ಫಳಫಳನೆ ಹೊಳೆಯುತ್ತಿತ್ತು. ಅಬ್ರಾಹಮ್ ನನಗೆ ತನ್ನ ಚರ್ಚ್‌ಗೆ ಸಂಬಂಧಿಸಿದ ಕಾರ್ಯಕ್ರಮದ ಬಗ್ಗೆ ಏನೋ ಹೇಳುತ್ತಿದ್ದ, ಇದನ್ನು ನಾನು ಕೇಳಿಯೂ, ಕೇಳದಂತಿದ್ದೆ. ನನ್ನ ಗಮನ ಬೇರೆಡೆಗಿತ್ತು. ಮನಸ್ಸಿನಲ್ಲಿ ಬಿರುಗಾಳಿ ಹಬ್ಬಿತ್ತು.

'ತುಂಬಾ ವಾಕ್ ಆಯ್ತು, ಇನ್ನು ಮನೆಗೆ ಹೋಗೋಣ, ಜೋಶುಆ ಸಹ ನಮ್ಮನ್ನು ಕಾಯುತ್ತಿರಬೇಕು...' ಎಂದು ಅಬ್ರಾಹಮ್ ಮನೆಯೆಡೆಗೆ ಹೊರಳಿದ.

ಜೋಶುಆ! ನಮ್ಮ ಮಗ! ಅವನಿಗಾಗಿ ಎಲ್ಲವನ್ನೂ ಸಹಿಸಲೇ? ಇಲ್ಲ!

'ನಿಲ್ಲಿ, ನಾನು ನಿಮಗೊಂದು ವಿಷಯ ಹೇಳಬೇಕಿದೆ.'

ಅಬ್ರಾಹಮ್ ನಿಂತು ಪ್ರಶ್ನಾರ್ಥಕ ದೃಷ್ಟಿಯಿಂದ ನನ್ನನ್ನು ನೋಡಿದ.

ನಾನು ಉಗುಳು ನುಂಗಿಕೊಂಡು ತೂಕದ ಶಬ್ದಗಳಲ್ಲಿ ಹೇಳಲು ಆರಂಭಿಸಿದೆ. ಕಂಪಿಸುತ್ತಿದ್ದ ನನ್ನ ಧ್ವನಿ ನನಗೆ ಅಪರಿಚಿತವೆಂದು ಅನ್ನಿಸಿತು,

'ನೋಡಿ, ನಿಮ್ಮ ಬಳಿಗೆ ಅನೇಕ ಜನ ತಮ್ಮ ಸಮಸ್ಯೆಗಳನ್ನು ಹೊತ್ತು ಬರುತ್ತಾರೆ, ನಿಮ್ಮಲ್ಲಿ ಸಲಹೆಗಳನ್ನು ಕೇಳುತ್ತಾರೆ. ಅಲ್ಲವೇ...?'

'ಏನೀಗ?'

'ಇಂದು ನೀವು ನನ್ನನ್ನು ಸಹ ಚರ್ಚ್‌ನ ಒಬ್ಬ ಭಕ್ತೆ ಎಂದು ತಿಳಿಯಿರಿ. ನಾನೂ ಸಹ ಕೇಳುವುದಿದೆ...'

'ಕೇಳು, ನನ್ನ ಭಕ್ತೆ ನ್ಯಾನ್ಸಿ ಕೋಶಿ...' ಅಬ್ರಾಹಮ್ ಮುಗುಳ್ನಕ್ಕ.

'ಗಂಡ ಅಥವಾ ಹೆಂಡತಿ, ಇಬ್ಬರೂ ವಿವಾಹದ ಹೊರಗೆ ಅನುಚಿತ ಮತ್ತು ನ್ಯಾಯಸಮ್ಮತವಲ್ಲದ ಸಂಬಂಧವನ್ನಿಟ್ಟುಕೊಂಡರೆ, ವೈವಾಹಿಕ ಜೀವನದಲ್ಲಿ ಬಿರುಕುಗಳು ಬೀಳುವುದಿಲ್ಲವೇ? ಪತಿಯ ಅನುಚಿತ ಕಾರ್ಯಗಳನ್ನು ಪತ್ನಿ ತಡೆದಾಗ, ಪತಿ, ನನ್ನದೊಂದು ಪ್ರತ್ಯೇಕ ಜೀವನವಿದೆ, ಅದರಲ್ಲಿ ಪತ್ನಿ ಹಸ್ತಕ್ಷೇಪ ಮಾಡಬಾರದು ಎಂದಾಗ, ಇಂಥ ಪರಿಸ್ಥಿತಿಯಲ್ಲಿ ವೈವಾಹಿಕ ಜೀವನ ಹೆಚ್ಚು ದಿನ ಉಳಿಯುವುದೇ? ಹೆಂಡತಿಯನ್ನು ತನ್ನ ವೈಯಕ್ತಿಕ ವಿಚಾರಗಳಿಂದ ದೂರವಿಡುವುದು, ಅವಳೊಂದಿಗೆ ವಿಷಯಗಳನ್ನು ಹಂಚಿಕೊಳ್ಳದಿರುವುದು, ಅವಳನ್ನು ಅಸಡ್ಡೆಯಿಂದ ನೋಡುವುದು, ಈ ಎಲ್ಲಾ ಸಂಗತಿಗಳು ಕ್ರಮೇಣ ವೈವಾಹಿಕ ಜೀವನ ಮುರಿದು ಹೋಗಲು ಕಾರಣವಾಗುವುದಿಲ್ಲವೇ?'

ಅಬ್ರಾಹಮ್ ನನ್ನ ಮಾತುಗಳನ್ನು ಮೌನವಾಗಿ ಕೇಳುತ್ತಿದ್ದ, ಅವನ ಮುಖದಲ್ಲಿ ಭಯದ ಭಾವನೆಗಳು ಮೂಡಿದ್ದವು. ಅವನು ರೇಗಿದ, 'ನೀನೇನು ಹೇಳಬೇಕೆಂದಿದ್ದೀಯ?'

ನಾನು ಏಕವಚನವನ್ನು ಪ್ರಯೋಗಿಸುತ್ತಾ ನೇರವಾಗಿ ಹೇಳಿದೆ, 'ನೋಡು ಅಬ್ರಾಹಮ್, ನಾನು ನಿನ್ನನ್ನು ತುಂಬಾ ಸಹಿಸಿದೆ. ನಿನ್ನೊಂದಿಗಿದ್ದು ತುಂಬಾ ಅವಮಾನಕ್ಕೆ ಒಳಗಾಗಿದ್ದೇನೆ... ಅಲ್ಲ, ನನ್ನಲ್ಲೇನು ಕೊರತೆಯಿತ್ತು, ನೀನು ನಮ್ಮ ವೈವಾಹಿಕ ಜೀವನವನ್ನು ಬದಿಗಿಟ್ಟು, ಪರ ಸ್ತ್ರೀಯರ ಬಳಿಗೆ ಹೋಗುತ್ತೀಯಲ್ಲ! ನೀನು ನಿಯಮಬಾಹಿರ ಲೈಂಗಿಕ ಸಂಬಂಧವನ್ನು, ಅದೂ ಅನೇಕ ಮಹಿಳೆಯರೊಂದಿಗೆ ಇಟ್ಟುಕೊಂಡಿದ್ದೀಯ. ನಾನು ತಡೆದರೂ, ಆ ಸಂಬಂಧಗಳನ್ನು ನೀನು ಬಿಡಲಿಲ್ಲ. ಪಾರ್ಟಿಗಳನ್ನು ಮಾಡುವುದು, ಮಹಿಳೆಯರನ್ನು ಸಂಭೋಗಿಸುವುದು... ನಿನ್ನ ಜೀವನ ಮಹಿಳೆಯರಲ್ಲಿ ಮುಳುಗಿಹೋಗಿದೆ. ನಿನ್ನ ನೀಚ ಕಾಮುಕತನದಲ್ಲಿ ನನಗೆ ಜಾಗವಿಲ್ಲ. ನಾನು ನಿನ್ನನ್ನು ತ್ಯಜಿಸುತ್ತಿದ್ದೇನೆ. ಏಸು ಸಹ ಇಂಥ ಅನೈತಿಕತೆಯಲ್ಲಿ ವಿಚ್ಛೇದನಕ್ಕೆ ಅನುಮತಿಯನ್ನು ಕೊಡುತ್ತಾನೆ.'

'ನೀನು ನನ್ನನ್ನು ಬಿಟ್ಟು ಹೋಗುತ್ತಿದ್ದೀಯ?'

'ನಾನು ಈ ಮೊದಲೇ ನಿನ್ನನ್ನು ಬಿಟ್ಟು ಹೋಗಬೇಕಿತ್ತು.'

'ಎಲ್ಲಿಗೆ ಹೋಗ್ತೀಯ?' ಅವನ ಧ್ವನಿ ತೊದಲಿತು.

'ನಾನು ಡೆನ್ಮಾರ್ಕ್‌ಗೆ ಹೋಗುತ್ತಿದ್ದೇನೆ...'

ಇಬ್ಬರ ನಡುವೆ ಮೌನ ಕವಿಯಿತು. ಕೆಲವು ಕ್ಷಣಗಳು ಕಳೆದುಹೋದವು.

'ಲಾರ್ಸ್ ಬಳಿಗೆ ಹೋಗುತ್ತೀಯ...?'

ನಾನು ಹೌದೆಂಬಂತೆ ತಲೆಯಾಡಿಸಿದೆ.

'ಯೂ ಬಿಚ್! ನನಗೆ ಮೊದಲ ದಿನವೇ ಅನುಮಾನ ಬಂದಿತ್ತು. ಆ ಕೆಂಪು ಕೋತಿ ಏನೋ ಕಿತಾಪತಿ ಮಾಡುತ್ತಿದ್ದಾನೆ ಅಂತ... ನ್ಯಾನ್ಸಿ, ನೀನು ತುಂಬಾ ಚಾಲಾಕಿ ಹೆಂಗಸು. ನೀನು ಸ್ವಾರ್ಥಿ, ಕೃತಘ್ನೆ... ನೀನು ನನ್ನ ಬೆನ್ನಿಗೆ ಚೂರಿ ಹಾಕಿದ್ದೀಯ,' ಅಬ್ರಾಹಮ್ ಸಿಟ್ಟಿನಿಂದ ಕಂಪಿಸುತ್ತಿದ್ದ. ಅವನು ರಭಸವಾಗಿ ಉಸಿರಾಡುತ್ತಿದ್ದ.

'ನೀನು ಲಂಪಟ... ಇಷ್ಟು ವರ್ಷಗಳಿಂದ ನನ್ನೆದುರೇ ನನ್ನೆದೆಯನ್ನು ಗರಗಸದಿಂದ ಕೊಯ್ಯುತ್ತಿದ್ದೀಯ... ನಾವು ಪರಸ್ಪರ ಒಪ್ಪಂದ ದಿಂದ ವಿಚ್ಛೇದನ ಪಡೆಯುವುದು ಒಳಿತು. ಕೋರ್ಟಿನಲ್ಲಿ ನಿನ್ನ ಮೇಲೆ ಕೆಸರು ಎರಚಲು ನನಗಿಷ್ಟವಿಲ್ಲ, ನಿನಗೆ ಅವಮಾನ ಮಾಡಲು ನಾನು ಬಯಸುವುದಿಲ್ಲ, ಏಕೆಂದರೆ ನೀನು ನನ್ನ ಜೋಶುಆನ ತಂದೆಯಾಗಿದ್ದೀಯ.'

ಅಬ್ರಾಹಮ್ ಸ್ವಲ್ಪ ಸಹಜಾವಸ್ಥೆಗೆ ಬಂದ, 'ಜೋಶುಆನ ಗತಿ ಏನು?' ಅವನು ನನ್ನನ್ನು ಪ್ರಶ್ನಿಸಿದ.

'ಅವನನ್ನು ನನ್ನೊಂದಿಗೆ ಡೆನ್ಮಾರ್ಕ್‌ಗೆ ಕರೆದು ಕೊಂಡು ಹೋಗುತ್ತಿದ್ದೇನೆ. ಕಸ್ಟಡಿ ನನ್ನ ಬಳಿ ಇರುವುದು, ನಿನಗೆ ವಿಸಿಟಿಂಗ್ ರೈಟ್ಸ್...'

'ಎಲ್ಲವನ್ನೂ ಮೊದಲೇ ಯೋಚಿಸಿದ್ದೀಯ, ನೀನೇ ಎಲ್ಲವನ್ನು ತೀರ್ಮಾನಿಸಿದ್ದೀಯ. ನಾನು ನನ್ನ ಮಗನನ್ನು ಎಲ್ಲಿಗೂ ಕರೆದೊಯ್ಯಲು ಬಿಡಲ್ಲ.'

ಅಬ್ರಾಹಮ್ ಬೆಂಕಿಯಾದ, 'ಅಲ್ಲಿ ಅವನಿರಲು ರೆಸಿಡೆಂಟ್ ಪರ್ಮಿಟ್ ಸಹ ಸಿಗಲ್ಲ.'

'ನಾನು ಲಾರ್ಸ್‌ನೊಂದಿಗೆ ಎಲ್ಲವನ್ನೂ ಮಾತನಾಡಿದ್ದೇನೆ. ಅವನು ಜೋಶುಆಗೂ ಸಹ ವೀಸಾ ಸ್ಪಾನ್ಸರ್ ಮಾಡಲು ಸಿದ್ಧನಿದ್ದಾನೆ. ನಾನೂ ಸಹ ಅಲ್ಲಿ ಏನಾದರೂ ಕೆಲಸವನ್ನು ಮಾಡ್ತೀನಿ. ಮನೆಯಲ್ಲಿ ಸುಮ್ಮನೆ ಕೂರಲ್ಲ.'

'ನಿನಗೆ ನಿನ್ನ ಬಗ್ಗೆ ತುಂಬಾ ಭರವಸೆಯಿದೆ!' ಅಬ್ರಾಹಮ್ ತನ್ನ ಮುಖವನ್ನು ವಿಕೃತಗೊಳಿಸಿ ಕೊಳ್ಳುತ್ತಾ ಹೇಳಿದ, 'ಯೂರೋಪ್ ಆಫ್ರಿಕಾ ಅಲ್ಲ. ಅಲ್ಲಿ ಏಶಿಯನ್ ಇಮಿಗ್ರೆಂಟ್ಸ್‌ಗೆ ಗೌರವವಿಲ್ಲ. ಅಲ್ಲಿ ನೌಕರಿಯನ್ನು ಪಡೆಯುವುದು ಸುಲಭವಲ್ಲ. ಇಲ್ಲಿ ನಿನಗೆ ಶಾಲೆಯ ನೌಕರಿ ಸಿಕ್ಕಿದ್ದು, ನನ್ನ ಶಿಫಾರಸ್ಸಿನಿಂದಾಗಿ ಎಂಬುದನ್ನು ಮರೆಯಬೇಡ.'

'ನಾನು ನೌಕರಿಗೆ ಅನರ್ಹಳಲ್ಲ. ಈ ನೌಕರಿ ನಿನ್ನ ಶಿಫಾರಸ್ಸಿನಿಂದ ಸಿಕ್ಕಿರಬಹುದು; ಆದರೆ ನಾನಿಲ್ಲಿ ಗಟ್ಟಿಯಾಗಿ ನಿಂತಿದ್ದು ನನ್ನ ಯೋಗ್ಯತೆಯಿಂದಾಗಿಯೇ' ನಾನು ತರ್ಕಿಸಿದೆ.

'ನಿನ್ನ ಬಗ್ಗೆ ನಿನಗೆ ತುಂಬಾ ಭರವಸೆಯಿದೆಯಲ್ಲ! ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸಣ್ಣ ಪ್ರಮಾಣದ, ಕೆಲಸಕ್ಕೆ ಬಾರದ ನೌಕರಿಗಳಂತೂ ಸಿಗುತ್ತವೆ, ಆದರೆ ಹೈ ಪ್ರೊಫೈಲ್ ನೌಕರಿಗಳು ಸಿಗುವುದು ಸುಲಭವಲ್ಲ.'

'ನಿನಗೆ ಆ ಬಗ್ಗೆ ಚಿಂತೆ ಬೇಡ.'

'ನನ್ನ ಮಗ ಎಲ್ಲಿಗೂ ಹೋಗಲ್ಲ' ಅವನು ಗರ್ಜಿಸಿದ.

ನಾನು ಅವನಿಗೆ ಶಾಂತಿಯಿಂದ ತಿಳಿಯಪಡಿಸಿದೆ, 'ನೋಡು ಅಬ್ರಾಹಮ್... ನಾನು ಈ ಹೆಜ್ಜೆ ಯನ್ನು ತುಂಬಾ ಯೋಚಿಸಿಯೇ, ನಮ್ಮೆಲ್ಲರ ಒಳಿತಿಗಾಗಿಯೇ ಇಡುತ್ತಿದ್ದೇನೆ. ನಿನಗೆ ಬೇಕಾದ ತೃಪ್ತಿಯನ್ನು ನಾನು ಕೊಡದಾದೆ; ನಿನ್ನ ಅವಶ್ಯಕತೆ ಗಳು ತುಂಬಾ ಭಯಾನಕವಾಗಿವೆ. ತಾಯಿಯಿಲ್ಲದೆ ಜೋಶುಆ ಹೆಣ್ಣುಗಳ ಖಯಾಲಿಯಿರುವ ತಂದೆಯೊಂದಿಗಿರುವುದು ಸರಿಯಲ್ಲ.'

ಸಮರ್ಪಣೆ ಮಾಡಿಕೊಳ್ಳುವ ಭಾವನೆಯಲ್ಲಿ ಅಬ್ರಾಹಮ್ ಯೋಚಿಸಿದ. ಅವನು ಮುಂದಿನ ಸಲಹೆಯನ್ನು ಕೊಟ್ಟಿದ್ದನ್ನು ನೋಡಿ ನನಗೆ ನಂಬಿಕೆಯಾಗಲಿಲ್ಲ, 'ನಾವಿಬ್ಬರು ನಮ್ಮ ನಮ್ಮ ಇಷ್ಟ ಮತ್ತು ವ್ಯವಸ್ಥೆಯೊಂದಿಗೆ ಇರೋಣ, ಆದರೆ ವೈವಾಹಿಕ ಬಂಧನವನ್ನು ಮುರಿಯುವುದು ಬೇಡ.'

ನಾನೂ ಸಹ ಅವನ ಸಲಹೆಯ ಬಗ್ಗೆ ಒಂದು ಕ್ಷಣ ಯೋಚಿಸಿದೆ, ಆದರೆ ಕಡೆಗೆ ಹೇಳಿದೆ, 'ಇಲ್ಲ, ನಮ್ಮ ನಡುವೆ ಎಲ್ಲವೂ ಮುಗಿದುಹೋಗಿದೆ.'

(ಸಶೇಷ)